ವೃತ್ತಿಯನ್ನು ಮುಂದುವರೆಸಿದ ಯಾರದೇ ಜೀವನಗಾಥೆಯಲ್ಲಿ ವೃತ್ತಿಯ ಆರಂಭದ ದಿನಗಳಲ್ಲಿ ನಿರ್ವಹಿಸಿದ ಜಿಲ್ಲಾಧಿಕಾರಿಯ ಹುದ್ದೆ ಬಹಳ ಮುಖ್ಯವಾದ ಜಾಗವನ್ನು ಪಡೆಯುತ್ತದೆ. ಯಾವುದೇ ಐಎಎಸ್ ಅಧಿಕಾರಿಯೊಂದಿಗೆ ಮಾತಾಡಿ ನೋಡಿ – ಅವರು ತಮ್ಮ ಜಿಲ್ಲೆಯ ಅನುಭವವನ್ನು ಬೆಚ್ಚಗೆ ನೆನಪು ಮಾಡಿಕೊಳ್ಳುತ್ತಾರೆ. ಅವರ ವೃತ್ತಿಜೀವನದ ಮಿಕ್ಕೆಲ್ಲ ಭಾಗಗಳಿಗಿಂತಲೂ ಈ ಅನುಭವ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಜಿಲ್ಲಾಧಿಕಾರಿಯಾದಾಗ ಅವರು ಆ ಜಿಲ್ಲೆಯನ್ನು ಚಕ್ರಾಧಿಪತಿಯಂತೆ ಆಳಬಹುದು. ಅಲ್ಲಿ ಅಧಿಕಾರವಿದೆ. ಮಾಡಿದ ಕೆಲಸದ ಪ್ರಭಾವವನ್ನು ತಕ್ಷಣಕ್ಕೆ ನೋಡಬಹುದು. ಜಿಲ್ಲೆಯ ದೇವರಾಗಿ ಆಳಬಹುದು. ಆದರೆ ಜೀವನದ ಮೊದಲ ಭಾಗದಲ್ಲಿ ಆದರ್ಶವಾದ ಹೆಚ್ಚಾಗಿ ಸ್ಥಳೀಯ ರಾಜಕೀಯವನ್ನು ಅರ್ಥಮಾಡಿಕೊಳ್ಳದೇ ಕ್ರಾಂತಿಕಾರಿ ಮನೋಭಾವದಿಂದ ತೀವ್ರಗತಿಯ ಬದಲಾವಣೆ ಮಾಡಬೇಕೆನ್ನುವ ಹುಮ್ಮಸ್ಸಿದ್ದರೆ ಏನಾಗುತ್ತದೆ? ಈ ಇಂಥ ಪರಿಸ್ಥಿತಿಯಲ್ಲಿ ಸ್ಥಳೀಯ ಶಕ್ತಿಗಳು ಈ ಅಧಿಕಾರಿಯನ್ನು ಎತ್ತಂಗಡಿ ಮಾಡಿಸುವತ್ತ ಕೆಲಸ ಮಾಡುತ್ತವೆ. ಸುಬ್ಬಾರಾವು ತಮ್ಮ ಯೌವನದ ಆದರ್ಶವಾದದಿಂದ ಹೀಗೆ ಸ್ಥಿರವಾಗಿ ಕೆಲಕಾಲ ಒಂದು ಜಿಲ್ಲಾಧಿಕಾರಿಯಾಗಿ ನೆಲೆಗೊಳ್ಳುವುದರಿಂದ ವಂಚಿತರಾಗುತ್ತಾರೆ. ಯುವಕರಾಗಿ ಸೇವೆಯಲ್ಲಿ ಹೊಸದಾಗಿರುವ ಜನರಿಗೆ ಜಿಲ್ಲೆಯನ್ನು ಆಳುವ ಅವಕಾಶ ಕೈಗೂಡುವಂತೆಯೇ, ಅವರುಗಳಿಗೆ ಜಿಲ್ಲೆಯ ಪೋಸ್ಟಿಂಗ್ ಸಿಗದಿದ್ದರೆ ಆಗುವ ಅಸಹಾಯಕತೆಯ ಮಟ್ಟವೇ ಬೇರೆ. ಸೇವೆಯಲ್ಲಿ ಹೊಸದಾಗಿ ಸೇರಿದವರು ಸಂಸ್ಥಾಗತ ಚೌಕಟ್ಟನ್ನು ಅರ್ಥ ಮಾಡಿಕೊಂಡಿರುವುದಿಲ್ಲ. ಮೇಲ್ಮಟ್ಟದ ಅಧಿಕಾರಿಗಳ ಪರಿಚಯವಿರುವುದಿಲ್ಲ. ರಾಜಕೀಯ ನಾಯಕರ ಪ್ರಭಾವಲಯದಿಂದ ತಪ್ಪಿಸಿನಡೆಯಲು ಪ್ರಯತ್ನ ಮಾಡುತ್ತಿರುವ ಈ ಜನರಿಗೆ ತಮ್ಮ ಆದರ್ಶಗಳು ತಕ್ಷಣದ ರಾಜಕೀಯ ಜರೂರತ್ತಿಗೆ ಬಲಿಯಾಗುವುದನ್ನು ಕಾಣಬಹುದು.

ಬೇರೊಬ್ಬರ ಜೀವನಗಾಥೆಯನ್ನು ನಾವು ಯಾಕೆ ಓದಬೇಕು? ಅದರಿಂದ ಆಗುವ ಉಪಯೋಗವೇನು? ಈ ಪ್ರಶ್ನೆಗಳು ಸಹಜವೇ. ಆದರೆ ಬೇರೊಬ್ಬರ ಜೀವನಾನುಭವಗಳೂ ನಮ್ಮ ಜೀವನಾನುಭವದಂತೆ; ಅಲ್ಲಿನ ದ್ವಂದ್ವಗಳು ನಮಗೂ ವರ್ತಿಸಿದರೆ ಅದು ನಮ್ಮದೇ ಆತ್ಮಾವಲೋಕನಕ್ಕೂ ಪೂರಕವಾಗುತ್ತದೆ. ಸುಬ್ಬಾರಾವು ಬರೆಯುವ ಶೈಲಿಯಲ್ಲಿ ಅವರೇ ಕೇಂದ್ರದಲ್ಲಿದ್ದರೂ, ಅವರು ಅದೃಶ್ಯರಾಗುತ್ತಾರೆ. ಲೇಖಕರ ಎದುರಿಗಿರುವ ಆಯ್ಕೆಗಳು, ಅವುಗಳ ಸಮರ್ಪಕತೆ ಮತ್ತು ಸಂದರ್ಭ ನಮ್ಮೆದುರಿಗೆ ನಿಲ್ಲುತ್ತದೆ. ಈ ಎಲ್ಲ ಆಯ್ಕೆಗಳಲ್ಲಿ ಭಿನ್ನ ಸಂದರ್ಭಗಳೂ ಮತ್ತು ನೈತಿಕತೆಯ ಪ್ರಶ್ನೆಗಳಿವೆ. ಒಮ್ಮೊಮ್ಮೆ ಸೋತು ಗೆಲ್ಲುವುದು ಸರಿಯೇ ಎನ್ನುವ ಪ್ರಶ್ನೆಯೂ ಎದುರಾಗುತ್ತದೆ. ಹೀಗೆ ಈ ಪ್ರಶ್ನೆಗಳನ್ನು ಲೇಖಕರು ಎತ್ತಿದಾಗ ಅದು ಅವರ ಪ್ರಶ್ನೆಯಾಗದೇ ನಮ್ಮ ಪ್ರಶ್ನೆಯೂ ಆಗುತ್ತದೆ. ರೈಲಿನಲ್ಲಿ

